**ಕರ್ನಾಟಕ ಸರ್ಕಾರದ ನಡವಳಿಗಳು**

*ವಿಷಯ:-* ಕೊಪ್ಪಳ ಜಿಲ್ಲೆ ಯಲಬುರ್ಗಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11 ರಿಂದ 2012-13 ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಕಳಪೆ ಅನುಷ್ಠಾನ ಹಾಗೂ ಅಂದಾಜು ಪಟ್ಟಿಯನುಸಾರ ಅನುಷ್ಠಾನಗೊಳಿಸದೆ ಹೆಚ್ಚುವರಿ ಅಳತೆ ದಾಖಲಿಸಿ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಅಧಿಕಾರಿ/ನೌಕರರ ವಿರುದ್ದ ಇಲಾಖಾ ವಿಚಾರಣೆ- ವಿಚಾರಣಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ಆದೇಶ.

*ಓದಲಾಗಿದೆ*

*1.* ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರ ಪತ್ರ ಸಂಖ್ಯೆ:ಪಂ.ರಾ.ಇಂ/ವಿಕೊ.ಸಿ3/ಕಿಇಂ/17-18/1136, ದಿ:05.9.2017.

*2.* ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 2 ಇಎನ್‌ಕ್ಯೂ 2016, ದಿನಾಂಕ:20.3.2018 .

*3.* ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 2 ಇಎನ್‌ಕ್ಯೂ 2015, ದಿನಾಂಕ:12.4.2018

*4.* ಆಪಾದಿತರ ವಿವರಣೆ ದಿನಾಂಕ:

1. ಶಂಕರಗೌಡ ಪಾಟೀಲ್, ಕಿರಿಯ ಇಂಜಿನಿಯರ್ ದಿ:18.6.2018.
2. ಹೆಚ್.ಯಮನ್ನೂರಪ್ಪ, ಹಿಂದಿನ ಕಾ.ಇಂ. ದಿ:22.5.2018.
3. ಬಿ.ಸಿ.ತೋಟಗಂಟಿ ಹಿಂದಿನ ಸ.ಕಾ.ಇಂ. ದಿ:21.5.2018.
4. ಎಸ್.ಡಿ.ನಾಗೋಡ, ಕಿ.ಇಂ, ದಿ:28.5.18.
5. ವೈ.ಬಿ.ಕುದರಿ, ಸ:ಕಾ.ಇಂ, ದಿ:11.5.2018.
6. ಕಳಕಯ್ಯ, ಕಿ.ಇಂ ದಿ:11.5.2018.
7. ಹೊನ್ನಪ್ಪ, ಸ.ಇಂ, ದಿ:22.5.2018

*ಪ್ರಸ್ತಾವನೆ:-*

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರು ಮೇಲೆ ಓದಲಾದ ಕ್ರಮಾಂಕ (1) ರ ದಿ:05.9.2017 ರ ಪತ್ರದೊಂದಿಗೆ ಕೊಪ್ಪಳ ಜಿಲ್ಲೆ ಯಲಬುರ್ಗಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ವ್ಯಾಪ್ತಿಯಲ್ಲಿ 2010-11 ರಿಂದ 2012-13 ನೇ ಸಾಲಿನಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳನ್ನು ಮಂಜೂರಾದ ಅಂದಾಜು ಪಟ್ಟಿಯನುಸಾರ ಅನುಷ್ಠಾನ ಮಾಡದೆ ಕಳಪೆ ಮಟ್ಟದಲ್ಲಿ ಅನುಷ್ಠಾನ ಮಾಡಿರುವುದು ಹಾಗೂ ವಾಸ್ತವವಾಗಿ ಅನುಷ್ಠಾನಗೊಳಿಸಿದ್ದಕ್ಕಿಂತ ಹೆಚ್ಚಿನ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ದ ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾಪಿಸಿ ಆರೋಪ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ್ದರು.

1. ಎಸ್.ಕೆ. ಪಾಟೀಲ್, ನಿವೃತ್ತ ಕಾರ್ಯಪಾಲಕ ಇಂಜಿನಿಯರ್,
2. ಶ್ರೀ ಪಿ.ಎ.ಭಜಂತ್ರಿ, ಹಿಂದಿನ ಕಾರ್ಯಪಾಲಕ ಇಂಜಿನಿಯರ್
3. ಹೆಚ್.ಯಮನೂರಪ್ಪ, ಕಾರ್ಯಪಾಲಕ ಇಂಜಿನಿಯರ್
4. ಎಸ್.ಮುರಳೀಧರ್, ಕಾರ್ಯಪಾಲಕ ಇಂಜಿನಿಯರ್

--2

5. ರವಿಪ್ರಸಾದ್, ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್
6. ಮನೋಜಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್
7. ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್
8. ಮಹಾಂತಪ್ಪ ಕನ್ನೂರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್
9. ವೈ.ಬಿ.ಕುದರಿ. ಸಹಾಯಕ ಕಾರ್ಯಪಾಲಕ ಇಂಜಿನಿಯರ್
10. ಜಾಕೀರ್ ಹುಸೇನ್, ಹಿಂದಿನ ಕಿರಿಯ ಇಂಜಿನಿಯರ್
11. ಬಿ.ಸಿ.ತೋಟಗಂಟಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್
12. ಗೋಪಿಲಾಲ್ ಜೈನ್, ಕಿರಿಯ ಇಂಜಿನಿಯರ್
13. ಎಲ್.ಎಂ. ಪೂಜಾರ್, ಕಿರಿಯ ಇಂಜಿನಿಯರ್
14. ಕಳಕಯ್ಯ, ಕಿರಿಯ ಇಂಜಿನಿಯರ್
15. ಶಂಕರೇಗೌಡ, ಕಿರಿಯ ಇಂಜಿನಿಯರ್
16. ಹೊನ್ನಪ್ಪ, ಕಿರಿಯ ಇಂಜಿನಿಯರ್
17. ಪದ್ಮನಾಭ ಜೋಶಿ, ಕಿರಿಯ ಇಂಜಿನಿಯರ್
18. ಎಸ್.ಡಿ.ನಾಗೋಡ. ಕಿರಿಯ ಇಂಜಿನಿಯರ್,

ಕ್ರಮ ಸಂಖ್ಯೆ (1) ಮತ್ತು (2) ರಲ್ಲಿನ ಅಧಿಕಾರಿಗಳು ಸೇವೆಯಿಂದ ನಿವೃತ್ತಿ ಹೊಂದಿದ್ದು ಪ್ರಕರಣ ನಡೆದ ದಿನಾಂಕಕ್ಕೆ ತಾಳೆ ನೋಡಲಾಗಿ ನಾಲ್ಕು ವರ್ಷಗಳಿಗಿಂತ ಹೆಚ್ಚಿನ ಅವಧಿ ಕಳೆದಿದ್ದರಿಂದ ಅವರನ್ನು ಹೊರತುಪಡಿಸಿ ಉಳಿದ ಕ್ರಮ ಸಂಖ್ಯೆ (3) ರಿಂದ (16) ರವರಗಿನ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ಇಲಾಖಾ ವಿಚಾರಣೆ ಜರುಗಿಸಲು ಉದ್ದೇಶಿಸಿ, ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:20.3.2018 ರಂದು ಕಾರಣ ಕೇಳುವ ನೋಟಿಸ್‌ನೊಂದಿಗೆ ಆರೋಪ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಮುಖಾಂತರ ಜಾರಿ ಮಾಡಲಾಗಿರುತ್ತದೆ.

ಸೇವೆಯಿಂದ ನಿವೃತ್ತರಾಗಿದ್ದ ಶ್ರೀ ಎಸ್.ಕೆ.ಪಾಟೀಲ್ ಮತ್ತು ಶ್ರೀ ಪಿ.ಎ.ಭಜಂತ್ರಿ, ಹಿಂದಿನ ಕಾರ್ಯಪಾಲಕ ಇಂಜಿನಿಯರ್‌ಗಳು ಇವರಿಂದ ಸರ್ಕಾರಕ್ಕೆ ಉಂಟಾಗಿದ್ದ ಆರ್ಥಿಕ ನಷ್ಟವನ್ನು ಸಿವಿಲ್ ದಾವೆ ಹೂಡಿ ವಸೂಲಿ ಮಾಡುವ ದಿಸೆಯಲ್ಲಿ ಕ್ರಮ ಕೈಗೊಳ್ಳಲು ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:12.4.2018 ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರಿಗೆ ನಿರ್ದೇಶನ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4) ರಲ್ಲಿ ನಮೂದಿಸಿರುವ 7 ಅಧಿಕಾರಿ/ನೌಕರರು ಅವರ ವಿರುದ್ಧದ ಆರೋಪಗಳಿಗೆ ಪ್ರತಿಯಾಗಿ ವಿವರಣೆ ಸಲ್ಲಿಸಿ, ತಮ್ಮನ್ನು ಆರೋಪಗಳಿಂದ ಕೈ ಬಿಡುವಂತೆ ಕೋರಿರುತ್ತಾರೆ. ಉಳಿದ ಆರೋಪಿತ ಅಧಿಕಾರಿ/ನೌಕರರು ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ, ಯಾವುದೇ ವಿವರಣೆಯನ್ನು ಸಲ್ಲಿಸಿರುವುದಿಲ್ಲ. ಇದರಿಂದಾಗಿ, ಸದರಿ ಆಪಾದಿತ ಅಧಿಕಾರಿ/ನೌಕರರ ವಿವರಣೆ ಏನೂ ಇರುವುದಿಲ್ಲವೆಂದು ಪರಿಗಣಿಸಲಾಗಿದೆ. ವಿವರಣೆ ಸಲ್ಲಿಸಿರುವ ನೌಕರರು ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿರುವುದರಿಂದ ಹಾಗೂ ಪ್ರಕರಣದಲ್ಲಿ ಬೃಹತ್ ಪ್ರಮಾಣದ ಆರ್ಥಿಕ ದುರುಪಯೋಗದ ಆರೋಪಗಳು ಕಂಡು ಬಂದಿರುವುದರಿಂದ ಎಲ್ಲಾ ಆರೋಪಿತರ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ, ವಿವರವಾದ ವಿಚಾರಣೆಯನ್ನು ನಡೆಸುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

**<u>ಆದೇಶ ಸಂಖ್ಯೆ: ಗ್ರಾಅಪ 02 ಇಎನ್‌ಕ್ಯೂ 2015, ಬೆಂಗಳೂರು, ದಿನಾಂಕ:09.10.2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಮೇಲೆ ಓದಲಾದ ಕ್ರಮಾಂಕ(2) ರ ಕಾರಣ ಕೇಳುವ ನೋಟಿಸ್ ಹಾಗೂ ಆರೋಪ ಪಟ್ಟಿಯಲ್ಲಿ ಮಾಡಲಾದ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ

---3

(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11 ಮತ್ತು 13 ರ ಅನುಸಾರ ನಡೆಸಲು ಸದರಿ ನಿಯಮಗಳ ನಿಯಮ 11(2) ರಡಿ ಶ್ರೀ ಸಂಗಪ್ಪ ಎನ್.ಗದ್ದಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ನಿಯಮ 11 (5) (ಸಿ) ರನ್ವಯ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ಶ್ರೀಯುತರು,

1. ಹೆಚ್.ಯಮನೂರಪ್ಪ, ಕಾರ್ಯಪಾಲಕ ಇಂಜಿನಿಯರ್
2. ಎಸ್.ಮುರಳೀಧರ್, ಕಾರ್ಯಪಾಲಕ ಇಂಜಿನಿಯರ್
3. ರವಿಪ್ರಸಾದ್, ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್
4. ಮನೋಜಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್
5. ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್
6. ಮಹಾಂತಪ್ಪ ಕನ್ನೂರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್
7. ವೈ.ಬಿ.ಕುದರಿ. ಸಹಾಯಕ ಕಾರ್ಯಪಾಲಕ ಇಂಜಿನಿಯರ್
8. ಜಾಕೀರ್ ಹುಸೇನ್, ಹಿಂದಿನ ಕಿರಿಯ ಇಂಜಿನಿಯರ್
9. ಬಿ.ಸಿ.ತೋಟಗಂಟಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್
10. ಗೋಪಿಲಾಲ್ ಜೈನ್, ಕಿರಿಯ ಇಂಜಿನಿಯರ್
11. ಎಲ್.ಎಂ. ಪೂಜಾರ್, ಕಿರಿಯ ಇಂಜಿನಿಯರ್
12. ಕಳಕಯ್ಯ, ಕಿರಿಯ ಇಂಜಿನಿಯರ್
13. ಶಂಕರೇಗೌಡ, ಕಿರಿಯ ಇಂಜಿನಿಯರ್
14. ಹೊನ್ನಪ್ಪ, ಕಿರಿಯ ಇಂಜಿನಿಯರ್
15. ಪದ್ಮನಾಭ ಜೋಶಿ, ಕಿರಿಯ ಇಂಜಿನಿಯರ್
16. ಎಸ್.ಡಿ.ನಾಗೋಡ. ಕಿರಿಯ ಇಂಜಿನಿಯರ್,

ವಿಚಾರಣಾಧಿಕಾರಿಗಳು ವಿಚಾರಣೆಯನ್ನು ನಿಗಧಿತ ವಿಧಿ ವಿಧಾನಗಳ ಅನುಸಾರ ನಡೆಸಿ, ವಿಚಾರಣಾ ವರದಿಯನ್ನು ಮೂರು ತಿಂಗಳ ಒಳಗೆ ಪೂರ್ಣಗೊಳಿಸಿ ವರದಿ ಸಲ್ಲಿಸತಕ್ಕದ್ದು, ವಿಚಾರಣಾ ವರದಿಯನ್ನು ಸಲ್ಲಿಸಿದ ನಂತರ ನಿಗಧಿತ ಸಂಭಾವನೆ ಪಡೆಯಲು ಅರ್ಹರಿರುತ್ತಾರೆ.

ವಿಚಾರಣಾಧಿಕಾರಿಯವರಿಗೆ ಅವಶ್ಯವಿರುವ ಸಿಬ್ಬಂದಿ, ಸ್ಥಳಾವಕಾಶ ಮತ್ತು ಲೇಖನ ಸಾಮಗ್ರಿಗಳನ್ನು ಒದಗಿಸಲು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಗ್ ವಿಭಾಗ, ಕೊಪ್ಪಳ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

09/10/201

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ಜಲ ಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ,
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.

5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
6. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು–ಎ ಮತ್ತು ಸಿ).
8. ಶ್ರೀ ಸಂಗಪ್ಪ ಎನ್.ಗದ್ದಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಎಲ್.ಆಯ್.ಸಿ ಅಫೀಸ್ ಮತ್ತು ಅಂಭಾ ಭವಾನಿ ದೇವಸ್ಥಾನದ ಹತ್ತಿರ, ಯಲಬುರ್ಗಾ ಅಂಚೆ, ಯಲುಬರ್ಗಾ ತಾಲ್ಲೂಕು (ನೊಂದಾಯಿತ ಅಂಚೆ ಮೂಲಕ)
9. ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಕೊಪ್ಪಳ.
10. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಮುಖಾಂತರ)
11. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
12. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
13. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.